ಎಂ ವಿ ಸಿ.ನಂ. 299/2024 ಪಿಡಬ್ಲೂಃ 2

ದಿನಾಂಕಃ 04-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿಃ ಶ್ರೀ ಎಮ್ ಡಿ ಆರ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ಸಾಕ್ಷಿ ಸಿಡಿ, ಸರ್ವೆ ರಿಪೋರ್ಟ, ಫೀ ರಸೀದಿ, ಫೋಟೋ, ಎಸ್ಟಿಮೇಶನ್ ನೋಡಿ ಗುರುತಿಸಿದ್ದು ಈಗಾಗಲೇ ನಿಪಿ-3 ರಿಂದ ನಿಪಿ-7 ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ-3 ಮತ್ತು ನಿಪಿ-4 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-3(ಎ) ಮತ್ತು ನಿಪಿ-4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ಎಸ್ ಎಮ್ ಬಿ ವಕೀಲರಿಂದ :**

3. ನನಗೆ ಈ ದಿನ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬರಬೇಕೆಂದು ಸಮನ್ಸ ಬಂದಿತ್ತು . ಕಳೆದ ವಾರ ನ್ಯಾಯಾಲಯದಿಂದ ಸಮನ್ಸ ಬಂದಿತ್ತು . ಆರ್ ಸಿ ಓನರ್ ಹೇಳಿದ ಮೇರೆಗೆ ನಾನು ವಾಹನ ಸರ್ವೆ ಮಾಡಿ ರಿಪೋರ್ಟನ್ನು ಕೊಟ್ಟಿರುತ್ತೇನೆ . ನಾನು ಸರ್ವೆ ಮಾಡಲು ಕ್ವಾಲಿಫೈಡ್ person ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ , ಆದರೆ ನನ್ನ ಲೈಸೆನ್ಸ ನಂಬರ ರಿಪೋರ್ಟನಲ್ಲಿ ಇದೆ . ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನಗೆ ಲೈಸೆನ್ಸ ಇದೆ ಎಂದು ಬರೆದದ್ದು ಇಲ್ಲ ಹಾಗೂ ಲೈಸೆನ್ಸ ನಂಬರನ್ನು ಕೂಡ ನಮೂದು ಮಾಡಿಲ್ಲ ಎಂದರೆ ಸರಿ . ನನಗೆ ಲೈಸೆನ್ಸ ಇದೆಯೋ ಇಲ್ಲವೋ ಅಥವಾ ಕಾಲಿಫಿಕೇಶನ್ ಇದೆಯೋ ಇಲ್ಲವೋ ನೋಡಲು ದಾಖಲಾತಿ ಅವಶ್ಯಕ ಎಂದರೆ ಸರಿ . ನಿಪಿ-6 ನಾನು ನೀಡಿರುವುದಿಲ್ಲ ಎಂದರೆ ಸರಿ . ಸದರಿ ದಾಖಲಾತಿಯಲ್ಲಿ ಓವರರೈಟಿಂಗ್ ಮಾಡಿದ್ದಾರೆ ಎಂದರೆ ಸರಿ . ವಾಹನವನ್ನು

ಚಂದಾವರ ಗ್ಯಾರೇಜ್ ನಲ್ಲಿ ಸರ್ವೆ ಮಾಡಿರುತ್ತೇನೆ . ಇನ್ಸುರೆನ್ಸ ಕ್ಲೇಮ್ ಮಾಡಲು ಸರ್ವೆ ಮಾಡಿರುತ್ತೇನೆ . ಅಪಘಾತವಾದ 20 ದಿನಗಳ ನಂತರ ನಾನು ವಾಹನವನ್ನು ಸರ್ವೆ ಮಾಡಿರುತ್ತೇನೆ . ಸರ್ವೆ ಮಾಡುವ ಸಮಯದಲ್ಲಿ ಮೋಟಾರು ವಾಹನಗಳ ನಿರೀಕ್ಷಕರ ವರದಿಯನ್ನು ನೋಡಿರುವುದಿಲ್ಲ . ಅಪಘಾತವಾದಾಗ ಮೋಟರು ವಾಹನ ನಿರೀಕ್ಷಕರು ವಾಹನವನ್ನು ಪರಿಶೀಲನೆ ಮಾಡಿ ವರದಿಯನ್ನು ಕೊಡುತ್ತಾರೆ ಎಂದರೆ ಸರಿ . ನಾನು ವಾಹನ ಪರಿಶೀಲನೆಯ ನಂತರ ನಿಪಿ-3 ಫೀ ಫಿಕ್ಸ ಮಾಡಿದ್ದಕ್ಕೆ ಮಾನದಂಡನೆ ಇದೆ. ಐ ಆರ್ ಡಿ ಎ ಮಾನದಂಡನೆಯನ್ನು ಫಿಕ್ಸ ಮಾಡಿರುತ್ತದೆ . ಸದ್ರಿ ಮಾನದಂಡನೆಯ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿ ಹಾಜರು ಪಡಿಸಿಲ್ಲ . ನಿಪಿ-3 ಬಿಲ್ ಅದಕ್ಕೆ ಸಂಬಂಧಪಟ್ಟಂತೆ ನಾನು ಪ್ರತ್ಯೇಕವಾದ ರಸೀದಿಯನ್ನು ಕೊಟ್ಟಿಲ್ಲ . ಐ ಆರ್ ಡಿ ಎ ಸರ್ಕೂಲರ್ ನಲ್ಲಿ ಆ ರೀತಿ ಮಾನದಂಡಣೆ ಫಿಕ್ಸ ಮಾಡಿಲ್ಲ ಹಾಗೂ ನಾನು ಐ ಆರ್ ಡಿ ಎ ನಂತೆ ಸರ್ಕೂಲರ್ ಪ್ರಕಾರ ಅಥವಾ ಯಾವುದೇ ಗೈಡಲೈನ್ಸ ಪ್ರಕಾರ ನಾನು ಚಾರ್ಜ ಮಾಡಿಲ್ಲ ಎಂದರೆ ಸರಿಯಲ್ಲ . ಪೋಟೋ ಯಾವ ಕ್ಯಾಮರಾ ಮೂಲಕ ತೆಗೆಯಲಾಗಿದೆ ಆ ಬಗ್ಗೆ ಸರ್ಟಿಫಿಕೇಟ್ ಹಾಕಿಲ್ಲ ಎಂದರೆ ಸರಿ . ಸಿಡಿಯನ್ನು ಎಲ್ಲಿ ಮಾಡಿದ್ದೇವೆ ಆ ಬಗ್ಗೆ ಸರ್ಟಿಫಿಕೇಟ್ ನ್ನು ಕೊಟ್ಟಿಲ್ಲ ಎಂದರೆ ಸರಿ . ಪೋಟೋ ಹಾಗೂ ಸಿಡಿಗಳು ವಸ್ತು ಸ್ಥಿತಿ ಪ್ರಕಾರ ಇಲ್ಲ , ಅರ್ಜಿದಾರರಿಗೆ ಸಹಾಯ ಮಾಡಲು ಪೋಟೋ ಹಾಗೂ ಸಿಡಿಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ . ಪೋಟೋದಲ್ಲಿ ಕಾಣಿಸುವಷ್ಟು ನಾನು ಹೇಳಿದಂತೆ ವಾಹನಕ್ಕೆ ಅಪಘಾತದಲ್ಲಿ ಡ್ಯಾಮೇಜ್ ಆಗಿಲ್ಲ ಎಂದರೆ ಸರಿಯಲ್ಲ . ಅಸ್ಸೆಸ್‌ಮೆಂಟ್ ಹಾಗೂ ರಿಪ್ಲೆಸಮೆಂಟ್ ಅರ್ಜಿದಾರರಿಗೆ ಸಹಾಯ ಮಾಡಲು ಬರೆದಿದ್ದೇನೆ ಎಂದರೆ ಸರಿಯಲ್ಲ. ಅಸ್ಸೆಸ್‌ಮೆಂಟ್ ಹಾಗೂ ರಿಪ್ಲೆಸಮೆಂಟ್ ಬಗ್ಗೆ ಇಂತಿಷ್ಟು ಚಾರ್ಜ ಆಗುತ್ತದೆ ಎಂದು ಶೋ ರೂಮ್ ನಲ್ಲಿ ಎನಕ್ವಾರಿ ಮಾಡಿ ನಮೂದಿಸಿರುತ್ತೇನೆ . ಅರವಿಂದ್ ಮೋಟಾರ್ಸ ರವರಲ್ಲಿ ವಿಚಾರಣೆ ಮಾಡಿರುತ್ತೇನೆ. ರಿಪೋರ್ಟ ತಯಾರಿಸುವ ಸಮಯದಲ್ಲಿ ವಿಚಾರಣೆ ಮಾಡಿರುತ್ತೇನೆ . ಪೋನ್ ನಲ್ಲಿ ವಿಚಾರಣೆ ಮಾಡಿರುತ್ತೇನೆ. ಲಿಖಿತವಾಗಿ ಪಡೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅವರು ಲಿಖಿತವಾಗಿ ಕೊಡುವುದಿಲ್ಲ ಎಂದು ನುಡಿದಿರುತ್ತಾರೆ . ಅವರು ಲಿಖಿತವಾಗಿ ಕೊಡುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಸ್ಪೇರ್ ಪಾರ್ಟ ಗೆ ಇಂತಿಷ್ಟು ಹಣ ಎಂದು ಶೋ ರೂಮ್ ನವರು ಹೇಳಬೇಕು . ನಾವು ವರದಿಯಲ್ಲಿ ಬರುವುದು ಬರೆದಿರುವುದು ನಿಜ ಅಥವಾ ಸುಳ್ಳು ಎಂದು ತಿಳಿಯಲು ಶೋ ರೂಮ್ ನವರ ಪ್ರೈಸ್ ಲಿಸ್ಟ ಬೇಕಾಗುತ್ತದೆ ಎಂದರೆ ಸರಿ . ನಾನು ನನ್ನ ವರದಿಯ ಜೊತೆಗೆ ಪ್ರೈಸ್ ಲಿಸ್ಟ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಕ್ಷಿ ಅವರು ಕೊಡುವುದಿಲ್ಲ ಎಂದು ನುಡಿದಿರುತ್ತಾರೆ . ಕೊಡಲಿಕ್ಕೆ ಬರುವುದಿಲ್ಲ ಎಂದು ಅವರು ಬರೆದುಕೊಟ್ಟ ದಾಖಲಾತಿ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ . ನಾನು ಶೋ ರೂಮ್ ನವರನ್ನು ಕೇಳಿಲ್ಲ ನನ್ನ ಮನಸೋ ಇಚ್ಛೆ ರೇಟ್ ನ್ನು ವರದಿಯಲ್ಲಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ . ನಿಪಿ-6 ರಲ್ಲಿ ನಮೂದಿಸಿದ ವಸ್ತುಗಳ ರೇಟಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿ ಇಲ್ಲ . ನಿಪಿ-6 ರ ಆಧ್ಧದ ಮೇಲೆ ನಿಪಿ-3 ನ್ನು ಕೊಟ್ಟಿರುತ್ತಾರೆ. ನಿಪಿ-6 ನ್ನು ಯಾವ ಆಧಾರದ ಮೇಲೆ ತಯಾರಿಸಿರುತ್ತಾರೆ ಗೊತ್ತಿಲ್ಲ. ಮೋಟಾರು ವಾಹನ ನಿರೀಕ್ಷಕರು ನೀಡಿದ ವರದಿ ಹಾಗೂ ನಾನು ನೀಡಿದ ವರದಿಗೆ ಅಜಗಜಾಂತರ ವ್ಯತ್ಯಾಸ ಇದೆ , ಕಾರಣ ನಾನು ನನ್ನ ವರದಿಯಲ್ಲಿ ತೋರಿಸುವಷ್ಟು ಡ್ಯಾಮೇಜ್ ವಾಹನಕ್ಕೆ ಆಗಿಲ್ಲ ಎಂದರೆ ಸರಿಯಲ್ಲ . ಪಾರ್ಟಗಳನ್ನು ರಿಪ್ಲೇಸ್ ಮಾಡಿಲ್ಲ ಎಂದರೆ ಸರಿಯಲ್ಲ . ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ರಿಪೋರ್ಟ ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಎದುರುದಾರರ ಪರಃ ಶ್ರೀ ವಾಯ್ ವಿ ಎಸ್ ವಕೀಲರಿಂದ :**

4. ನಾನು ವಾಹನ ಡ್ಯಾಮೇಜ್ ಅಸೆಸ್ ಮಾಡಿದ ಬಗ್ಗೆ ಬಾಯಿಮಾತಿನ ಹೇಳಿಕೆಯನ್ನು ಬಿಟ್ಟರೆ ದಾಖಲಾತಿ ಇಲ್ಲ ಎಂದರೆ ಸರಿ . ಸ್ಥಳದಲ್ಲಿ ಹಾಜರಿದ್ದು ವಾಹನದ ಡ್ಯಾಮೇಜ್ ಆಸೆಸ್ ಮಾಡಲು ಪಂಚರನ್ನು ಕರೆಸಿ ಪಂಚರ ಸಮಕ್ಷಮ ಪಂಚನಾಮೆ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅದು ನಮ್ಮ ಡ್ಯೂಟಿ ಅಲ್ಲ ಎಂದು ನುಡಿದಿರುತ್ತಾರೆ . ನಾನು ಮಾಡಿದ ಅಸೆಸ್ ಮೆಂಟ್ ನನ್ನ ಪ್ರಕಾರ 100% ನಿಖರವಾಗಿರುತ್ತದೆ. ನಾನು ಸ್ಥಳಕ್ಕೆ ಹೋಗಿಲ್ಲ , ವಾಹನದ ಲಾಸ್ ಅಸೆಸ್ ಮೆಂಟ್ ಮಾಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ

ಸಹಾಯ ಮಾಡಲು ಮನಸೋ ಇಚ್ಛೆ ಫಿಗರ್ ನ್ನು ನಮೂದಿಸಿ ವರದಿಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ .

ಈ ಹಂತದಲ್ಲಿ 3 ನೇ ಎದುರುದಾರ ಪರ ವಕೀಲರು 2 ನೇ ಎದುರುದಾರ ಪರ ವಕೀಲರ ಪಾಟೀ ಸವಾಲನ್ನು ಅನುಮೋದಿಸಿಕೊಂಡಿರುತ್ತಾರೆ .

ಎದುರುದಾರು 1(ಎ) ಮತ್ತು 1(ಬಿ) ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

4 ನೇ ಎದುರುದಾರ ಪರ ವಕೀಲರನ್ನು ಕೂಗಿಸಿ ಕರೆಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.